# ಸಂಗೀತ ವಿವಿಗೆ ಸಮರ್ಥ ಸಾರಥಿ

★ ಡಾ.ಎ. ರಘುರಾಮ್



ಡಾ. ಹನುಮಣ್ಣನಾಯಕ ದೊರೆ

ರಾಜ್ಯ ಸರ್ಕಾರವು ದಕ್ಷಿಣ ದೇಶದ ಮೊದಲ ಸಂಗೀತ ವಿಶ್ವ ವಿದ್ಯಾಲಯ ವನ್ನು ಕೊಡುಗೆಯಾಗಿ ಮೈಸೂರಿನಲ್ಲಿ ನೆಲೆ ನಿಲ್ಲಿಸಿದೆ. ಸಂಗೀತ ವಿವಿಯ ವಿಶೇಷಾಧಿಕಾರಿಯಾಗಿ ನೇಮಕಗೊಂಡು ಕುಲಪತಿಯ ಹುದ್ದೆಗೆ ಭಡ್ತಿ ಪಡೆದಿರುವ ನಾಡಿನ ಹೆಸರಾಂತ ಹಿಂದೂಸ್ತಾನಿ ಗಾಯಕ ಡಾ. ಹನುಮಣ್ಣ ನಾಯಕ ದೊರೆ ಇದರ ಸಾರಥ್ಯ ವಹಿಸಿದ್ದಾರೆ. ಇದಕ್ಕೂ ಮೊದಲು ಅವರು ಕನ್ನಡ ವಿಶ್ವವಿದ್ಯಾಲಯದ ಸಂಗೀತ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ, ಮುಖ್ಯಸ್ಥರಾಗಿ, ಲಲಿತಕಲಾ ವಿಭಾಗದ ಡೀನ್ ಆಗಿದ್ದವರು.

ಡಾ. ಹನುಮಣ್ಣನಾಯಕ ದೊರೆ ಅವರದು ಬಹುಮುಖ ಪ್ರತಿಭೆ. ಸಂಗೀತ ಕಲಾವಿದರಾಗಿ, ಪ್ರಾಧ್ಯಾಪಕರಾಗಿ, ಸಂಗೀತ ಗುರುವಾಗಿ, ಸಂಗೀತ ಸಂಯೋಜಕರಾಗಿ, ಕವಿಯಾಗಿ – ಹೀಗೆ ಅವರದು ಬಹುಮುಖ ಪ್ರತಿಭೆ. ಇದೀಗ ಸಂಗೀತ ವಿವಿಯ ಪ್ರಥಮ ಕುಲಪತಿಯಾಗಿ ಅದನ್ನು ಕಟ್ಟಿ ಬೆಳೆಸಬೇಕಾದ ಹೊಣೆಗಾರಿಕೆ ಇವರ ಮೇಲಿದೆ.

ಎಲ್ಲ ವಿಶ್ವವಿದ್ಯಾಲಯಗಳಂತೆಯೇ ಸಂಗೀತ ವಿವಿಯು ಸಹ ಸ್ಥಾಪನೆ ಯಾದ ಹೊಸದರಲ್ಲಿ ಎದುರಿಸಬೇಕಾದ ಸಮಸ್ಯೆಗಳಿಗೆ ಮುಖಾಮುಖಿ ಯಾಗಿದೆ. ವಿವಿ ಸ್ಥಾಪನೆಯ ಸ್ಥಳ ಮಂಜೂರಾತಿಗಾಗಿ ತಮ್ಮನ್ನು ಪದೇ ಪದೇ ಅಲೆದಾಡಿಸಿ ಉಡಾಫೆಯಾಗಿ ಮಾತನಾಡಿದ್ದ ಅಧಿಕಾರಿಯೊಬ್ಬರಿಗೆ 'ನಾನೇನು ನನ್ನ ಸ್ವಂತಕ್ಕಾಗಿ ಮನೆ ಕಟ್ಟಿಕೊಳ್ಳಲು ಜಾಗ ಕೊಡಿ ಎಂದು ಕೇಳಲು ಬಂದಿಲ್ಲ. ಒಬ್ಬ ವಿಶ್ವವಿದ್ಯಾಲಯದ ಕುಲಪತಿಯ ಹುದ್ದೆಯ ಘನತೆಯನ್ನು ಅರಿತು ಮಾತನಾಡಿ' ಎಂದವರು ಹನುಮಣ್ಣನಾಯಕರು. ಸಂಗೀತ ವಿವಿಯ ವಿಶೇಷಾಧಿಕಾರಿಯಾಗಿ ನೇಮಕಗೊಂಡಾಗಿನಿಂದ ಅವರ ಹೋರಾಟ ನಿರಂತರ.

ಮೈಸೂರು ಜಿಲ್ಲೆಯಾದ್ಯಂತ ಮೂಲೆಮೂಲೆಗೆ ತಿರುಗಿ ಕೊನೆಗೆ ವರಕೋಡಿನಲ್ಲಿ ವಿವಿ ಸ್ಥಾಪನೆಗಾಗಿ ಕಂದಾಯ ಇಲಾಖೆಗೆ ಸೇರಿದ ಭೂಮಿ ಯ ಹಕ್ಕುಪತ್ರ ಪಡೆದಾದ ಮೇಲೆಯೂ, ಅದು ನಮ್ಮ ಜಾಗ ಎಂದು ಹಿಂಬಾಗಿಲಿನಿಂದ ಬಂದು ಕ್ಯಾತೆ ತೆಗೆದಿರುವ ಅರಣ್ಯ ಇಲಾಖೆಯ ಅಧಿಕಾರಿಗಳ ಕಿರುಕುಳವನ್ನು ಅವರು ಸವಾಲಾಗಿಯೇ ಸ್ವೀಕರಿಸಿದ್ದಾರೆ.

ಮೂಲತಃ ಹಿಂದೂಸ್ತಾನಿಯ ಗ್ವಾಲಿಯರ್ ಕಿರಾಣ ಘರಾಣೆಯ ಸೃಜನಶೀಲ ಗಾಯಕ ಇವರು. ಉಸ್ತಾದ್ ಮಶ್ಕೂರ್‌ಅಲಿ, ಪಂಡಿತ್ ರಾಜೀವ್‌ತಾರಾನಾಥ್‌ರಲ್ಲಿ ಹೆಚ್ಚಿನ ಅಭ್ಯಾಸ ಮಾಡುತ್ತಿದ್ದಾರೆ. ಇವರ ಗುರು ಪರಂಪರೆ ಕೂಡ ಅಷ್ಟೇ ದೀರ್ಘವಾದದ್ದು. ಪಂ. ಬಸವರಾಜ ರಾಜಗುರು, ಡಾ. ಮಲ್ಲಿಕಾರ್ಜುನ ಮನ್ಸೂರ್, ಡಾ. ಗಂಗೂಬಾಯಿ ಹಾನಗಲ್, ಪಂ. ಪಂಚಾಕ್ಷರಿಸ್ವಾಮಿ ಮತ್ತಿಗಟ್ಟ, ಪಂ. ರಾಜೀವ್ ಪುರಂಧರೆ, ಪಂ. ಸಂಗಮೇಶ್ವರ ಗುರುವ, ಪಂ. ರಮೇಶ್ ನಾಡಕರ್ಣಿ, ಪಂ. ನಾನಾ ಶೆಡೋಲಿಕರ್, ಜಾನಕಿ ಅಯ್ಯರ್, ಉಸ್ತಾದ್ ಮಶ್ಕೂರ್ ಅಲಿಖಾನ್, ಪದ್ಮಾವತಿ ಸಾಲಿಗ್ರಾಮ, ಪಂ. ವಿ.ಎನ್. ಬದಿ, ಪಂ. ಮಾಧವಗುಡಿ ಮುಂತಾದವರಿದ್ದಾರೆ. ಆಕಾಶವಾಣಿ – ದೂರದರ್ಶನ, ಮೈಸೂರು ದಸರಾ ಉತ್ಸವ, ಹಂಪಿ ಉತ್ಸವ, ದೆಹಲಿಯ ಇಂದಿರಾಗಾಂಧಿ ಜಯಂತಿ ಉತ್ಸವ, ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳು ಸೇರಿದಂತೆ ನೂರಾರು ವೇದಿಕೆಗಳಲ್ಲಿ ತಮ್ಮ ಗಾಯನವನ್ನು ಪ್ರಸ್ತುತಪಡಿಸಿದ್ದಾರೆ. ಅವರು ಹಾಡಿರುವ ಸ್ವರ ತರಂಗ, ಬಸವವಾಣಿ, ವಚನದೀಪ್ತಿ ಮೊದಲಾದ ಧ್ವನಿಸಾಂದ್ರಿಕೆಗಳು ಬಿಡುಗಡೆಯಾಗಿವೆ. ವಚನಗಳು, ದಾಸರಪದ, ಭಾವಗೀತೆಗಳಿಗೆ ಸ್ವರಸಂಯೋಜಿಸಿದ್ದಾರೆ. ತಿಲಕ ಕಾಮೋದ, ಹೇಮಕಲ್ಯಾಣ, ದರಬಾರಿ ಕಾನಡಾ, ಲಂಕಾ ದಹನ ಸಾರಂಗ, ಮಾಂಡಭೈರವ, ಭೀಮಪಲಾಸಿ, ನಾಯಕಿ ಕಾನಡಾ, ಜೋಗ, ಭೂಪ, ದೇಶಕಾರ, ದುರ್ಗಾ, ಶುದ್ಧಸಾರಂಗ, ಶ್ರೀ, ತೋಡಿ ಮುಂತಾದ ರಾಗಗಳಲ್ಲಿ ಅವರು ಸ್ವತಃ ಚೀಜು ರಚಿಸಿದ್ದಾರೆ. ಇವರ ಶಿಷ್ಯ ಪರಂಪರೆ ಕೂಡ ದೀರ್ಘವಾಗಿದೆ. ಡಾ. ಅಶೋಕ್ ಹುಗ್ಗಣ್ಣವರ, ಯಲ್ಲಪ್ಪ ಭಂಡಾರಿ, ಡಾ. ರವಿಕಿರಣ್ ನಾಕೋಡ, ಶ್ರೀವಿದ್ಯಾ ಗಿರೀಶ, ಡಾ. ಮಾರುತಿ ಪೂಜಾರಿ, ಡಾ. ಕಲಾವತಿ ದೊರೆ, ಪ್ರೊ.ಭರತ ಶಿಲ್ಪಿ, ಮದನಗೋಪಾಲ ನಾಯಕ (ಮಗ), ನಾಗೇಂದ್ರಪ್ಪ ಪಾಟೀಲ, ಮಹೇಶ್ ಬಡಿಗೇರ, ಕಂಪ್ಲಿ ಶ್ರೀನಿವಾಸ್, ತಿಮ್ಮಣ್ಣ ಮಾನಪಡೆ, ಜುಮ್ಮನಗೌಡ, ದುಷ್ಯಂತರಾಜನಾಯಕ (ಮಗ), ಮೀನಾಕ್ಷಿ ಎಸ್.ಬಿ., ಮಯೂರವರ್ಮ ನಾಯಕ (ಮಗ), ರೇಖಾ ಬೆಳಗಲಿ, ವಿಜೇತ ಅರಸ, ಮಂಜುಳಾ ಚಪ್ಪರದಳ್ಳಿ, ಚಂದನ, ಮಾರುತಿ ಪ್ರಸಾದ್, ಕಲ್ಯಾಣಿ ಮನ್ಸೂರ, ಹನುಮಯ್ಯ ಪಿಲಿಗೊಂಡ ಹೀಗೆ ಇವರ ಶಿಷ್ಯ ಪರಂಪರೆ ಮುಂದುವರಿದಿದೆ.

## ಪ್ರಶಸ್ತಿ; ಪುರಸ್ಕಾರ

ತಮ್ಮ ಮೂವತ್ತೇಳನೆಯ ವಯಸ್ಸಿನಲ್ಲಿ ರಾಜ್ಯೋತ್ಸವ ಪ್ರಶಸ್ತಿ ಪಡೆದಿರುವ ನಾಯಕರು – ಸರ್ ಎಂ. ವಿಶ್ವೇಶ್ವರಯ್ಯ, ಬುದ್ಧ ಪ್ರಶಸ್ತಿ, ಚಂದ್ರಹಾಸ ಪ್ರಶಸ್ತಿ, ಗುಲ್ಬರ್ಗ ಬೃಹನ್ಮಠದ ಗಾನಗಂಧರ್ವ ಪ್ರಶಸ್ತಿ, ಸಂಗೀತ ನೃತ್ಯ ಅಕಾಡೆಮಿಯ ಗ್ರಂಥ ಪ್ರಶಸ್ತಿ, ಎಂ.ಪಿ. ಪ್ರಕಾಶ್ ಪ್ರತಿಷ್ಠಾನದ ಪ್ರತಿಷ್ಠಿತ ಸಂಗೀತ ಗಿರಿ ಹೊಯ್ಸಳ ಪ್ರಶಸ್ತಿ ಹೀಗೆ ಅನೇಕ ಪ್ರಶಸ್ತಿ ಪುರಸ್ಕಾರಗಳಿಂದ ಸನ್ಮಾನಿತರಾಗಿದ್ದಾರೆ.

ಹಿಂದೂಸ್ತಾನಿ ರಾಗ–ಚೀಜುಗಳ ಕುರಿತಾದ ರಾಗದೀಪಿಕೆ ಅವರ ಸಂಶೋಧನಾ ಕೃತಿ. ಹಲವಾರು ರಾಗಗಳ ನಿರ್ದಿಷ್ಟ ಸ್ವರಸ್ಥಾನಗಳನ್ನು (ನೊಟೇಷನ್) ಈ ಕೃತಿಯಲ್ಲಿ ದಾಖಲಿಸಿದ್ದಾರೆ. ಪ್ರತಿಯೊಂದು ರಾಗದ ಹಿಂದಿನ ಮನೋಧರ್ಮವನ್ನು ಅವುಗಳ ಕಾಲಮಾನದ ಹಿನ್ನೆಲೆಯಲ್ಲಿ ಗುರುತಿಸಿದ್ದಾರೆ. ಪರಂಪರಾನುಗತವಾಗಿ ನಡೆದುಬಂದ ಚೀಜುಗಳಿಗೆ ಸ್ವರ ಪ್ರಸ್ತಾರ ಗುರುತಿಸಿ ಸ್ವರ ಲಿಪಿಗೆ ಅಳವಡಿಸಿದ್ದಾರೆ. ಈ ಮೂಲಕ ಅವರ ರಾಗದೀಪಿಕೆ ಭಾರತೀಯ ಅಭಿಜಾತ ಸಂಗೀತ ಶಾಸ್ತ್ರ ಕೃತಿಗಳ ಸಾಲಿನಲ್ಲಿ ಶಾಶ್ವತವಾದ ಸ್ಥಾನ ಪಡೆಯಬಲ್ಲ ಗ್ರಂಥವಾಗಿದೆ. ಈ ಮೂಲಕ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದ ವ್ಯಾಕರಣಕ್ಕೆ ದೊರೆ ಅವರ ಕೊಡುಗೆ ಅಮೂಲ್ಯವಾದದ್ದು. ಈ ಗ್ರಂಥಕ್ಕೆ ಅಕಾಡೆಮಿಯ ಪ್ರಶಸ್ತಿ ದೊರೆತಿದೆ. ಇದರೊಂದಿಗೆ ವಚನಗಳ ಹಾಡುಗಾರಿಕೆಯ ಸ್ವರಲಿಪಿ ಕೃತಿ ವಚನಗಾನ ವಾಹಿನಿ ಅವರದೇ ಸಂಪಾದನೆಯ ದಾಂಪತ್ಯ ಸಂಪದ ಹಾಗೂ ಅಭಿನಂದನಾ ಗ್ರಂಥ – ಪತ್ರಿಕೆಗಳಿಗೆ ಬರೆದ ಲೇಖನಗಳನ್ನು ಈ ಹಿನ್ನೆಲೆಯಲ್ಲಿ ಗಮನಿಸಬಹುದು.

ಸಂಗೀತಕ್ಕೆ ಅವರು ನೀಡಿರುವ ಕೊಡುಗೆಯನ್ನು ಪರಿಗಣಿಸಿ ಸಂಗೀತ – ನೃತ್ಯ ಅಕಾಡೆಮಿಯು ಈ ಸಲದ ರಾಜ್ಯ ಸರಕಾರದ ಕರ್ನಾಟಕ ಕಲಾಶ್ರೀ ಪ್ರಶಸ್ತಿ ನೀಡಿ ಗೌರವಿಸುತ್ತಿದೆ. (2011 ಏಪ್ರಿಲ್ 15ರಂದು ಬೆಂಗಳೂರಿನ ರವೀಂದ್ರ ಕಲಾ ಕ್ಷೇತ್ರದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭವು ನಡೆಯಲಿದೆ.)

